FTS no:- 56587

# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS


Ph No. 080-22291150
Fax No. 080-22223558
E-mail: pgtrustkptcl@yahoo.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.


ಸಂಖ್ಯೆ: ಕೆಇಪಿಜಿಟಿ/ಪಿ19/2013-14/ ೬೪೯೩೨ ದಿನಾಂಕ: 25 NOV 2013

## ನೆನಪೋಲೆ

ವಿಷಯ: ಪ್ರತಿ ಮಾಹೆ ಪಿಂಚಣಿ/ಕುಟುಂಬ ಪಿಂಚಣಿ ನಿಧಿ ಕೋರಿಕೆಯಲ್ಲಿ ವಿವರಣೆ ನೀಡುವ ಕುರಿತು.
ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ: ಕೆಇಪಿಜಿಟಿ/ಪಿ19/2013-14/ಸಿವೈಎಸ್26 ದಿನಾಂಕ: 11.10.2013.

* * * * *

ಎಲ್ಲಾ ಲೆಕ್ಕ ಘಟಕಗಳು ಪ್ರತಿ ಮಾಹೆ ಪಿಂಚಣಿ/ಕುಟುಂಬ ಪಿಂಚಣಿ ಪಾವತಿಸುವ ಸಲುವಾಗಿ ಈ ಕಛೇರಿಗೆ ಕೋರಿಕೆ ಸಲ್ಲಿಸುತ್ತಿದ್ದು ಅವುಗಳಲ್ಲಿ ಹಲವಾರು ನ್ಯೂನತೆಗಳು ಕಂಡುಬಂದಿದ್ದರೂ ಸಹ ಪಿಂಚಣಿ/ಕುಟುಂಬ ಪಿಂಚಣಿದಾರರ ಹಿತ ಕಾಪಾಡುವ ಸಲುವಾಗಿ ನಿಧಿ ವರ್ಗಾವಣೆಯನ್ನು ನಿಯತವಾಗಿ ಮಾಡಲಾಗಿರುತ್ತದೆ.

ಮುಂದುವರೆಸುತ್ತಾ, ಉಲ್ಲೇಖಿತ ಸುತ್ತೋಲೆಯಲ್ಲಿ ದಿನಾಂಕ: 25.10.2013 ರೊಳಗಾಗಿ ನಿಗದಿತ ನಮೂನೆಯಲ್ಲಿ (ಒಂದು ಬಾರಿಗೆ ಮಾತ್ರ) ಅಕ್ಟೋಬರ್ 2013 ರ ತಿಂಗಳಿನಲ್ಲಿರುವಂತೆ ಪಿಂಚಣಿ/ಕುಟುಂಬ ಪಿಂಚಣಿದಾರರ ವಿವರಗಳನ್ನು ಸಲ್ಲಿಸಲು ಸೂಚಿಸಲಾಗಿತ್ತು. ಹಲವಾರು ಲೆಕ್ಕ ಘಟಕಗಳು ಮಾಹಿತಿ ಸಲ್ಲಿಸದೆ ಇರುವುದರಿಂದ ಕ್ರೋಢಿಕೃತ ಮಾಹಿತಿ ತಯಾರಿಸಲು ಸಾಧ್ಯವಾಗಿರುವುದಿಲ್ಲ. ಆದ್ದರಿಂದ, ಈ ಪತ್ರ ತಲುಪಿದ ಒಂದು ವಾರದೊಳಗೆ ಉಲ್ಲೇಖಿತ ಸುತ್ತೋಲೆಯಲ್ಲಿ ಸೂಚಿಸಿರುವ ನಮೂನೆಯಲ್ಲಿ ವಿವರಗಳನ್ನು ಸಲ್ಲಿಸದೇ ಇರುವ ಲೆಕ್ಕಘಟಕಗಳು ಕೋರಿರುವ ವಿವರಗಳನ್ನು ಸಲ್ಲಿಸಲು ಸೂಚಿಸಲಾಗಿದೆ. ಮಾಹಿತಿ ನೀಡಲು ವಿಳಂಬ ಮಾಡಿದಲ್ಲಿ ಸಂಬಂಧಿಸಿದ ಲೆಕ್ಕಾಧಿಕಾರಿಗಳೇ ನೇರವಾಗಿ ಹೊಣೆಗಾರರಾಗುತ್ತಾರೆಂದು ಈ ಮೂಲಕ ತಿಳಿಸಲಾಗಿದೆ.

ನಿಯಂತ್ರಣಾಧಿಕಾರಿ ಮತ್ತು ವ್ಯವಸ್ಥಾಪಕ ಟ್ರಸ್ಟಿ
ಪಿಂಚಣಿ ಮತ್ತು ಉಪದಾನ ಟ್ರಸ್ಟ್.

ಪ್ರತಿ:

ಅಧೀಕ್ಷಕ ಇಂಜಿನಿಯರ್ (ವಿ), ಮಾಹಿತಿ ತಂತ್ರಜ್ಞಾನ, ಗಣಕ ಯಂತ್ರ ಶಾಖೆ, ಕಾವೇರಿ ಭವನ, ಬೆಂಗಳೂರು-09, ಕೆಇಪಿಜಿಟಿ ವೆಬ್‌ತಾಣದಲ್ಲಿ ಪ್ರಕಟಿಸಲು ಕೋರಲಾಗಿದೆ.

ಎಲ್ಲಾ

ಲೆಕ್ಕಾಧಿಕಾರಿಗಳು ಕಾರ್ಯ ಮತ್ತು ಪಾಲನಾ ವಿಭಾಗ, ಬೆವಿಕಂ/ಚಾವಿಸನಿ/ಗುವಿಸಕಂ/ಹುವಿಸಕಂ/ಮವಿಸಕಂ.

ಲೆಕ್ಕಾಧಿಕಾರಿಗಳು, ಕವಿಪ್ರನಿನಿ, ಎಂ ಆರ್ ಎಸ್, ಶಿವಮೊಗ್ಗ/ವ್ಯವಸ್ಥಾಪಕರು(ನ&ಲೆ), ಕಾವೇರಿ ಭವನ.